**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –4

**CC No**: 41/2020 ಚಾಸ– 4

| ಹೆಸರು | **ರಮೇಶ್ ಆರ್** |
|---|---|
| ತಂದೆ/ಗಂಡನ ಹೆಸರು | **ಜೆ ರಾಮೇಗೌಡ** |
| ವಯಸ್ಸು | **52 ವರ್ಷ** |
| ಉದ್ಯೋಗ | **ಬಟ್ಟೆ ಅಂಗಡಿ ವ್ಯಾಪಾರ** |
| ವಾಸಸ್ಥಳ | **ಹಾಸನ** |

ದಿನಾಂಕಃ 07.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸುಮಾರು 5 ವರ್ಷಗಳ ಹಿಂದೆ ನಾನು ಗ್ರಾಂಮಾಂತ ಪೋಲೀಸ್ ಠಾಣೆಯ ವೃತ್ತನಿರೀಕ್ಷರ ಕಛೇರಿ ಹತ್ತಿರ ಹೋದಾಗ ಒಂದು ದಾಖಲಾತಿಯ ಮೇಲೆ ಪೋಲೀಸರು ನನ್ನ ಸಹಿ ಪಡಿದಿರುತ್ತಾರೆ . ಸಾಕ್ಷಿ ದಿಃ 04.01.2020ರ ಅಮಾನತು ಮಹಜರ್ ನ ಟ್ರೂ ಕಾಫಿಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 3 ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ನಿಪಿ 3 ಅನ್ನು ಯಾವಾಗ ಎಲ್ಲಿ ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಮತ್ತು ಯಾವುದೇ ಆರೋಪಿಗಳನ್ನು

ತೋರಿಸಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀಸವಾಲು ಸ.ಸ.ಅಭಿಯೋಜಕರಿಂದಃ**

ದಿಃ 04.01.2021ರಂದು ನಾನು ಮತ್ತು ಚಾಸಾ 5ರವರು ಕಛೇರಿಯ ಮುಂಭಾಗದ ರಸ್ತೆಯಲ್ಲಿ ನಿಂತಾಗ ಪೋಲೀಸರು ನಮ್ಮನ್ನು ಮಹಜರ್ ಗೆ ಬರುವಂತೆ ಕರೆದು ಶಾಂತಿಗ್ರಾಮ ಪೊಲೀಸ್ ಠಾಣೆ ಮೋ ನಂಬರ್ 142/19 ಕಲಂ 457,380ರ ಪ್ರಕರಣದ ಬಗ್ಗೆ ನಮಗೆ ತಿಳಿಸಿದರು ಎಂದರೆ ಸರಿಯಲ್ಲ . ಆನಂತರ ಪೋಲೀಸರ ವಶದಲ್ಲಿದ ಈ ಪ್ರಕರಣದ 1,2,4 ಹಾಗೂ ಬೇರೆ ಪ್ರಕರಣದ ಆರೋಪಿಗಳನ್ನು ನನಗೆ ತೋರಿಸಿದರು ಎಂದರೆ ಸರಿಯಲ್ಲ. ವಿ ಸಿ ಮೂಲಕ ಹಾಜರಿರೂವ ಆರೋಪಿಯನ್ನು ಪೊಲೀಸರು ಆ ದಿನ ನನಗೆ ತೋರಿಸಿದರು ಎಂದರೆ ಸರಿಯಲ್ಲ . ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿರುವಂತಹ ಎರಡು ಕಾರು ಮತ್ತು ಎರಡು ಕಬ್ಬಿಣದ ರಾಡುಗಳನ್ನು ಅಮಾನತು ಪಡಿಸಿಕೂಳ್ಳುವ ಸಲುವಾಗಿ ಪಂಚರಾಗಿ ಬರುವಂತೆ ನಮ್ಮನ್ನು ಆ ದಿನ ತನಿಖಾಧಿಕಾರಿ ವಿನಂತಿಸಿಕೊಂಡಾಗ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ . ನಂತರ ಠಾಣೆಯ ಆವರಣದಲ್ಲಿದ್ದ ಹೊಂಡಯ್ ಕಂಪನಿಯ ಕಪ್ಪು ಬಣ್ಣದ ಸೆಂಟ್ ಕಾರ್ ಸಂಖ್ಯೆ ಕೆ ಎ 09 ಎನ್ 1703ಅನ್ನು ನನ್ನ ಸಮಕ್ಷಮ ಪೊಲೀಸರು ಜಪ್ತಿ ಪಡಿಸಿಕೊಂಡಿದ್ದು ನಂತರ ಎರನಡೇ ಆರೋಪಿ ಸದರಿ ಕಾರಿನಲ್ಲಿದ್ದ ಕೃತ್ಯಕ್ಕೆ ಬಳಸಲಾದ ಕಬ್ಬಿಣದ ರಾಡನ್ನು ಹಾಜರು ಪಡಿಸಿದ್ದು ಅದನ್ನು ಸಹ ನಮ್ಮ ಸಮಕ್ಷಮ ಜಪ್ತಿ ಪಡಿಸಿಕೂಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಠಾಣೆಯ ಆವರಣದಲ್ಲಿದ್ದ ಇನ್ನೊಂದು ಹೊಂಡಯ್ ಕಂಪನಿಯ ಸಿಲ್ವರ್ ಬಣ್ಣದ ಸೆಂಟ್ ಕಾರ್ ಸಂಖ್ಯೆಕೆ ಎ 04 ಎಂ ಸಿ 0800ಅನ್ನು ನನ್ನ

ಸಮಕ್ಷಮ ಪೊಲೀಸರು ಜಪ್ತಿ ಪಡಿಸಿಕೊಂಡಿದ್ದು ನಂತರ ಒಂದನೇ ಆರೋಪಿ ಸದರಿ ಕಾರಿನಲ್ಲಿದ್ದ ಕೃತ್ಯಕ್ಕೆ ಬಳಸಲಾದ ಕಬ್ಬಿಣದ ರಾಡನ್ನು ಹಾಜರು ಪಡಿಸಿದ್ದು ಅದನ್ನು ಸಹ ನಮ್ಮ ಸಮಕ್ಷಮ ಜಪ್ತಿ ಪಡಿಸಿಕೂಂಡಿರುತ್ತಾರೆ ಎಂದರೆ ಸರಿಯಲ್ಲ. ಬೆಳಗ್ಗೆ 8.30 ರಿಂದ 9.30 ಗಂಟೆಯ ವರೆಗೆ ತನಿಖಾಧಿಕಾರಿ ನಮ್ಮ ಸಮಕ್ಷಮ ನಿಪಿ 3 ರಂತೆ ಮಹಜರ್ ಮಾಡಿ ಅದನ್ನು ನಮಗೆ ಓ ಹೇಳಿ ಸ್ಥಳದಲ್ಲಿಯೇ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಈ ಸಂಬಂಧ ಈಗ ನನಗೆ ಓದಿ ಹೇಳಿದಂತೆ ನಾನು -------------- ದಿಂದ ಹೇಳಿಕೆಯನ್ನು ನೀಡಿರುತ್ತೇನೆ ಎನ್ನುವವರೆಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ . ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ಗೊತ್ತಿದ್ದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಹಾಜರಿದ್ದು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ .

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.